**ಕಥಾಪ್ರಭ**

# ಕಾಲೂರಾಮನು ಕಲ್ಯಾಣದೇವರಾಗಿದ್ದು

ಸ್ವಾಮಿ ಕರುಣಾಕರಾನಂದ



ಉತ್ತರ ಪ್ರದೇಶದ ಮುಜಫರ್‌ನಗರ ಜಿಲ್ಲೆಯ ಮುಂಡ್‌ಭರ್ ಒಂದು ಕುಗ್ರಾಮ. ಅಲ್ಲಿ ಫೇರುದತ್ತ ಹಾಗೂ ಆತನ ಧರ್ಮಪತ್ನಿ ಭೋಯಿದೇವಿ ಎಂಬುವವರು ವಾಸಿಸುತ್ತಿದ್ದರು. ಅವರಿಗೀಗಾಗಲೇ ಇಬ್ಬರು ಮಕ್ಕಳಿದ್ದರು. ಭೋಯಿದೇವಿ ತನ್ನ ಮೂರನೆಯ ಹೆರಿಗೆಗಾಗಿ ಬಾಗ್‌ಪತ್ ಜಿಲ್ಲೆಯ ಕೋತಾನಾ ಎಂಬ ಹಳ್ಳಿಯಲ್ಲಿರುವ ತನ್ನ ತವರು ಮನೆಗೆ ಹೋದರು. ೧೮೭೬ ನೆ ಜೂನ್ ೨೧ ರಂದು ಭೋಯಿದೇವಿಗೆ ಗಂಡುಮಗುವೊಂದು ಜನಿಸಿತು. ಮಗುವಿಗೆ ಕಾಲೂರಾಮನೆಂದು ಹೆಸರಿಟ್ಟರು.

ಕಾಲೂರಾಮನ ಬಾಲ್ಯ ಅವನ ಸೋದರತ್ತೆ ಸುರಜೀ ಎಂಬುವವರು ನೆಲೆಸಿದ್ದ ಬುಧಾನಾ ಹಳ್ಳಿಯಲ್ಲಿ ಕಳೆಯಿತು. ಅವನ ತಂದೆಯ ಸೋದರಿಯ ಗಂಡ ಬುಲ್ಲಾ ಭಗತ್ ಎನ್ನುವವರು ಅಲ್ಲಿನ ದೊಡ್ಡ ಜಮೀನ್ದಾರರಾಗಿದ್ದರು. ಮನೆಯಲ್ಲಿ ಯಾವುದಕ್ಕೂ ಕೊರತೆಯಿರಲಿಲ್ಲ. ಆದರೂ ಅವರಿಗೆ ತಮಗೆ ಮಕ್ಕಳಿಲ್ಲವೆಂಬುದೇ ಸಹಿಸಲಾರದ ವೇದನೆಯನ್ನು ನೀಡುತ್ತಿತ್ತು. ಆ ವೇದನೆಯನ್ನು ಹೋಗಲಾಡಿಸಿಕೊಳ್ಳಲು ಸಂತರ ಸೇವೆಯಲ್ಲಿ ಹಾಗೂ ಭಗವದ್ಭಕ್ತಿಯ ಭಾವದಲ್ಲಿ ತಮ್ಮ ಮನಸ್ಸನ್ನು ತೊಡಗಿಸಿದರು. ಬುಲ್ಲಾ ಭಗತ್‌ನ ಸಾಧುಸೇವೆಯ ಖ್ಯಾತಿ ಎಲ್ಲಿಯವರೆಗೂ ಹಬ್ಬಿತ್ತೆಂದರೆ ಯಾವಾಗ ನೋಡಿದರೂ ಸಾಧು-ಸಂತರು ಅವನ ಮನೆಗೆ ಬರುತ್ತಿದ್ದರು. ಪ್ರತಿದಿನ ಬೆಳಗ್ಗೆ ಹಾಗೂ ಸಾಯಂಕಾಲ ಅವನ ಮನೆಯಲ್ಲಿ ರಾಮಕಥೆ (ನಮ್ಮಲ್ಲಿ ಹರಿಕಥೆ ಇರುವಂತೆ) ಹಾಗೂ ಭಜನೆಗಳು ನಡೆಯುತ್ತಿದ್ದವು ಮತ್ತು ಅದರ ನಂತರ ಪ್ರಸಾದವನ್ನು ವಿತರಿಸಲಾಗುತ್ತಿತ್ತು.

ಇವನ್ನೆಲ್ಲ ಕಂಡು ಕಾಲೂರಾಮನಿಗೆ ಹೇಳಲಾಗದ ಆನಂದ. ಅವನು ಹೊತ್ತಿಗೆ ಬಹಳ ಮುಂಚೆಯೇ ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿ ಸಜ್ಜಾಗಿ, ತನ್ನ ಸೋದರತ್ತೆಯ ಗಂಡನೊಂದಿಗೆ ಒಂದು ಮರದ ಮಂಚದ ಮೇಲೆ ಕುಳಿತು, ತದೇಕಚಿತ್ತದಿಂದ ರಾಮಕಥೆಯನ್ನು ಕೇಳುತ್ತಿದ್ದ. ಬಾಲ್ಯದಲ್ಲಿ ಕೇಳಿದ ರಾಮಾಯಣದ ಘಟನೆಗಳು ಕಾಲೂರಾಮನ ಮೇಲೆ ಅಗಾಧ ಪರಿಣಾಮ ಬೀರಿದವು. ಅದರಲ್ಲಿ ನಿರೂಪಿಸಲ್ಪಟ್ಟ ವ್ಯಕ್ತಿತ್ವಗಳ ಆದರ್ಶಗಳೇ ಇವನಿಗೂ ಆದರ್ಶವಾದವು. ಒಮ್ಮೆ ತನ್ನ ಸೋದರತ್ತೆಯ ಮನೆಯನ್ನು ತೊರೆದು ಸಾಧು-ಸಂತರೊಂದಿಗೆ ಹೊರಟೇ ಬಿಟ್ಟ. ಹಾಗೆ ಹೋಗುವಾಗ ಅವನ ಮೈಮೇಲಿದ್ದದ್ದು ಒಂದು ಲಂಗೋಟಿ ಹಾಗೂ ಒಂದು ನೂಲಿನ ಮೇಲ್ವಸ್ತ್ರ ಅಷ್ಟೆ.

ಬರಿಗಾಲಿನಲ್ಲಿ ನಡೆಯುತ್ತ, ಕೈಯನ್ನೆ ತನ್ನ ಭಿಕ್ಷಾಪಾತ್ರೆಯಾಗಿ ಮಾಡಿಕೊಂಡು ಕಾಲೂರಾಮನು ಮಾರ್ಗವನ್ನು ಕೇಳುತ್ತ ಕೇಳುತ್ತ ಅಯೋಧ್ಯೆಗೆ ಬಂದ. ಅಲ್ಲಿ ಅವನು ಸ್ವಾಮಿ ರಾಮದಾಸರನ್ನು ಸಂಧಿಸಿ ಅವರಿಂದ ಅಕ್ಷರಜ್ಞಾನವನ್ನು ಸಂಪಾದಿಸಿಕೊಂಡ. ಈಗ ರಾಮಾಯಣದ ಹಿಂದಿ ಅನುವಾದವನ್ನು ತಾನೆ ಓದಬಲ್ಲವನಾಗಿದ್ದ. ಅಯೋಧ್ಯೆಯಲ್ಲಿದ್ದಾಗಲೇ ಅವನು ಹರಿದ್ವಾರ ತೀರ್ಥಕ್ಷೇತ್ರವನ್ನು ಕುರಿತು ಕೇಳಿದ್ದ. ಈಗ ಅವನ ತನು-ಮನಗಳೆರಡೂ ಅಯೋಧ್ಯೆಯಿಂದ ಹರಿದ್ವಾರದೆಡೆಗೆ ಹೊರಟಿತು. ಅಲ್ಲಿ ಅನೇಕ ಆಶ್ರಮಗಳಿಗೆ ಹೋಗುತ್ತಿದ್ದ. ಕಥೆ-ಕೀರ್ತನೆಗಳನ್ನು ಕೇಳುತ್ತ, ಸಾಧು ಮಹಾತ್ಮರೊಂದಿಗೆ ಸತ್ಸಂಗ ಮಾಡುತ್ತ, ಹಸಿವನ್ನು ಇಂಗಿಸಿಕೊಳ್ಳಲು ಭಿಕ್ಷೆ ಬೇಡಿ ಉಣ್ಣುತ್ತ, ಕಾಲ ಕಳೆಯುತ್ತಿದ್ದ.

## 'ವಿಶ್ವಪ್ರೇಮಿ' ಯೊಂದಿಗಿನ ಭೇಟಿ

೧೮೯೭ ನೆ ನವೆಂಬರ್ ತಿಂಗಳ ಕೊನೆಯ ೧೦ ದಿನಗಳು ಸ್ವಾಮಿ ವಿವೇಕಾನಂದರು ಡೆಹ್ರಾಡೂನ್‌ನಲ್ಲಿ ತಂಗಿದ್ದರು. ಅವರು ಅಲ್ಲಿಂದ ದೆಹಲಿ, ಅಲ್ವರ್‌ನ ಮೂಲಕ ಜೈಪುರವನ್ನು ತಲುಪಿ, ಅಲ್ಲಿನ 'ಖೇತ್ರಿ ಹೌಸ್' ನಲ್ಲಿ ಬೀಡುಬಿಟ್ಟದ್ದರು. ಡಿಸೆಂಬರ್ ೯ ರಂದು ಕುದುರೆಗಾಡಿಯ ಮೇಲೆ ಸವಾರಿ ಮಾಡಿ ಸ್ವಾಮೀಜಿ ತಮ್ಮ ಗುರುಭಾಯಿ ಹಾಗೂ ಶಿಷ್ಯರೊಂದಿಗೆ ರಾಜನ ಅತಿಥಿಯಾಗಿ ಡಿಸೆಂಬರ್ ೧೨ ರಂದು ಖೇತ್ರಿಗೆ ಬಂದು ತಲುಪಿದರು. ಅಲ್ಲಿ ಮಹಾರಾಜ ಅಜಿತ್ ಸಿಂಗ್‌ನ ಅತಿಥಿಯಾಗಿ 'ಸುಖ ಮಹಲ್' ಎಂಬ ತೋಟದ ಮನೆಯಲ್ಲಿ ಅವರ ವಾಸ್ತವ್ಯಕ್ಕೆ ಏರ್ಪಾಡು ಮಾಡಲಾಗಿತ್ತು. ಸ್ವಾಮೀಜಿ ಅಲ್ಲಿ ಮೂರು ವಾರಗಳು ಉಳಿದರು.

ಸ್ವಾಮಿ ವಿವೇಕಾನಂದರು ೧೮೯೩ ರಲ್ಲಿ ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಜಯಭೇರಿ ಬಾರಿಸಿ ತದನಂತರ ಹಿಂದೂ ಧರ್ಮವನ್ನು ಯಶಸ್ವಿಯಾಗಿ ಅಲ್ಲಿ ಬೋಧಿಸುತ್ತಿದ್ದಾರೆಂಬ ಸುದ್ದಿ ಭಾರತದಲ್ಲಿ ವಿಸ್ಮಯ, ಗೌರವ ಹಾಗೂ ಧನ್ಯತೆಯ ಭಾವಗಳನ್ನು ಜನರಲ್ಲಿ ಮೂಡಿಸಿತ್ತು. ಸ್ವಾಮಿ ವಿವೇಕಾನಂದರು ದೆಹಲಿ, ಅಲ್ವರ್, ಜೈಪುರ

ಮೂಲಕವಾಗಿ ಖೇತ್ರಿಗೆ ಬರುತ್ತಿದ್ದಾರೆ ಎಂಬ ಸುದ್ದಿ ಕೇಳುತ್ತಿದ್ದಂತೆಯೆ, ಕಾಲೂರಾಮನಿಗೆ ಹೇಗಾದರೂ ಮಾಡಿ ಸ್ವಾಮೀಜಿಯವರನ್ನು ಭೇಟಿ ಮಾಡಬೇಕೆಂಬ ಉತ್ಕಟ ಹಂಬಲವುಂಟಾಯಿತು. ದೃಢನಿಶ್ಚಯ ಮಾಡಿ ಕೊಂಡು ಕಾಲ್ನಡಿಗೆಯಲ್ಲೆ ಹರಿದ್ವಾರದಿಂದ ಜೈಪುರಕ್ಕೆ ಪ್ರಯಾಣ ಬೆಳೆಸಿದನು. ಅಲ್ಲಿ ತಲುಪಿದ ಮೇಲೆ ಸ್ವಾಮೀಜಿಯವರು ಖೇತ್ರಿಯ ಕಡೆ ಪ್ರಯಾಣ ಮಾಡುತ್ತಿದ್ದಾರೆಂದೂ, ಕೊಲ್ಕತಾಗೆ ಹಿಂತಿರುಗಿ ಹೋಗುವಾಗ ಅವರು ಬೇರೊಂದು ಮಾರ್ಗದಿಂದ– ಜೋಧಪುರ, ಅಜ್ಮೀರದ ಮೂಲಕ ಹೋಗುತ್ತಾರೆಂದು ಅವನಿಗೆ ತಿಳಿದುಬಂತು. ಆಗಿನ ದಿನಗಳಲ್ಲಿ ಖೇತ್ರಿಯನ್ನು ತಲುಪುವುದು ಬಹಳ ಕಷ್ಟವಾಗಿತ್ತು. ಆದರೆ, ಯುವಕ ಕಾಲೂರಾಮನೇನು ಸಾಮಾನ್ಯನಲ್ಲ. ಅವನ ಎಂದಿನ ಅಭ್ಯಾಸದಂತೆ ನಡೆದುಕೊಂಡೇ ಪ್ರಯಾಣ ಬೆಳೆಸಿದ. ಖೇತ್ರಿಯ ಒಂದು ತೋಟದ ಮನೆಯಲ್ಲಿ ಅವನಿಗೆ ಸ್ವಾಮೀಜಿಯ ಭೇಟಿಯಾಯಿತು.

## ಮಂತ್ರೋಪದೇಶ

"ಹಳ್ಳಿಯಿಂದ ಹಳ್ಳಿಗೆ ಹೋಗಿ ಸಮಾಜಸೇವೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ನಿಮಗೆ ಸ್ಫೂರ್ತಿ ಬಂದಿದ್ದು ಎಲ್ಲಿಂದ ?" ಎಂದು ಮುಂದೆ ಸ್ವಾಮಿ ಕಲ್ಯಾಣದೇವ್ ಎಂದು ಹೆಸರುವಾಸಿಯಾದ ಕಾಲೂರಾಮರನ್ನು 'ಅಮರ್ ಉಜಾಲಾ' ಎಂಬ ಸುಪ್ರಸಿದ್ಧ ಹಿಂದಿ ದೈನಂದಿನ ಪತ್ರಿಕೆಯ ವರದಿಗಾರರೊಬ್ಬರು ಅಕ್ಟೋಬರ್ ೧೪, ೨೦೦೩ ರ ಸಂಚಿಕೆಗಾಗಿ ಮಾಡಿದ ಸಂದರ್ಶನವೊಂದರಲ್ಲಿ, ಪ್ರಶ್ನೆ ಕೇಳಿದರು.

ಆಗ ಸ್ವಾಮಿಗಳು ತಮ್ಮ ಹಿಂದಿನ ದಿನಗಳನ್ನು ನೆನಪಿಸಿಕೊಂಡು ಹೀಗೆ ಉತ್ತರಿಸುತ್ತಾರೆ: "೧೮೯೭ರಲ್ಲಿ ಖೇತ್ರಿಯಲ್ಲಿ ನಾನು ಸ್ವಾಮಿ ವಿವೇಕಾನಂದರನ್ನು ಭೇಟಿಯಾದೆ. ಆಗ ಅವರು ನನಗೆ ಹೇಳಿದ ಮಾತು ಇದು: 'ನಿನಗೆ ಭಗವಂತನ ದರ್ಶನ ಮಾಡಬೇಕೆಂಬ ಬಯಕೆಯಿದ್ದರೆ, ಬಡವರ ಗುಡಿಸಿಲಿಗೆ ಹೋಗು; ನಿನಗೆ ಭಗವಂತನನ್ನು ಪಡೆಯುವ ಬಯಕೆಯಿದ್ದರೆ, ಬಡವರ, ದಿಕ್ಕಿಲ್ಲದವರ, ದಲಿತರ ಹಾಗೂ ದುಃಖಿಗಳ ಸೇವೆ ಮಾಡು.' ಸ್ವಾಮೀಜಿಯಿಂದ ನಾನು ಪಡೆದ ಮಂತ್ರವೆಂದರೆ, ಭಗವಂತನನ್ನು ಪಡೆಯಬೇಕಾದರೆ ಬಡವರ ಸೇವೆ ಮಾಡುವುದು. ಅದನ್ನು ನಾನು ಎಂದಿಗೂ ಮರೆಯಲಾರೆ."

ಇನ್ನೊಂದು ವರದಿಯ ಪ್ರಕಾರ, ಕಾಲೂರಾಮನು ಸ್ವಾಮೀಜಿಯವರನ್ನು ಭೇಟಿ ಮಾಡಿದಾಗ ಸ್ವಾಮೀಜಿ ಅವನಿಗೆ ಹೀಗೆ ಹೇಳಿದರಂತೆ: "ದರಿದ್ರರ ಗುಡಿಸಿಲಿನಲ್ಲಿ ಭಗವಂತನ ದರ್ಶನ ಮಾಡಬಹುದು. **ರೈತರು ಹಾಗೂ ಕಾರ್ಮಿಕರು–ಇವರೇ ಭಗವಂತನ ಎರಡು ಮಕ್ಕಳು.** ನೀನು ಬೆಳಿಗ್ಗೆ ಎದ್ದು ಮನೆಯಿಂದ ಹೊರಬಂದಾಗ, ನಿನಗೆ ಎರಡು ಶಬ್ದಗಳು ಕೇಳಿಬರುತ್ತವೆ: ಮಂದಿರದಲ್ಲಿ ಮೊಳಗುವ ಘಂಟಾನಾದ ಹಾಗೂ 'ಓ ದೇವರೇ! ನಾನು ಸಾಯುತ್ತಿದ್ದೇನೆ' ಎಂಬ ನೋವಿನ ಆರ್ತನಾದ. ನೀನು ಎರಡನೆಯ ಧ್ವನಿಯನ್ನು ಮೊದಲು ಆಲಿಸು. ನಿನ್ನ ಶಕ್ತ್ಯಾನುಸಾರ ಜನಗಳ ದುಃಖವನ್ನು ಕಡಿಮೆ ಮಾಡಲು ಪ್ರಯತ್ನಿಸು. ತದನಂತರವೇ ನೀನು ದೇವಮಂದಿರಕ್ಕೆ ಹೋಗಬಹುದು."

ಖೇತ್ರಿಯಿಂದ ಹರಿದ್ವಾರಕ್ಕೆ ಹಿಂತಿರುಗಿ ಯಾರಾದರೂ ಗುರುಗಳಿಂದ ದೀಕ್ಷೆಯನ್ನು ಪಡೆಯಬೇಕೆಂದು ಕಾಲೂರಾಮ ಹಂಬಲಿಸಿದನು. ತನ್ನ ಭಾವೀ ಗುರುವನ್ನು ಅರಸುತ್ತ, ಋಷೀಕೇಶದಲ್ಲಿರುವ 'ಮುನಿ ಕೀ ರೇತಿ' ಎಂಬಲ್ಲಿಗೆ ಹೋದನು. ಅಲ್ಲಿ ಸ್ವಾಮಿ ಪೂರ್ಣಾನಂದರೆಂಬ ಸರಳಸ್ವಭಾವದ, ಪರಿಶುದ್ಧ ಯತಿವರ್ಯರೊಂದಿಗೆ ಅವನ ಭೇಟಿಯಾಯಿತು. ಅವರು ಕಾಲೂರಾಮನ ಸೇವಾಪರಾಯಣತೆಯನ್ನು ಕಂಡು, ಅವನಿಗೆ ೧೯೦೦ ರಲ್ಲಿ ಸಂನ್ಯಾಸದೀಕ್ಷೆಯನ್ನಿತ್ತು, ಸ್ವಾಮಿ ಕಲ್ಯಾಣದೇವನೆಂಬ ಅಂಕಿತ ಕೊಟ್ಟರು. ಸಂನ್ಯಾಸದ ನಂತರ ಕಲ್ಯಾಣದೇವರು ಉತ್ತರಾಖಂಡದಲ್ಲಿಯೆ (ಈಗಿನ ಉತ್ತರಾಂಚಲ ರಾಜ್ಯದಲ್ಲಿರುವ ಪುಣ್ಯಕ್ಷೇತ್ರಗಳಿರುವ ಪ್ರದೇಶ; ಅಲ್ಲಿ ಸಾಧುಗಳು ಬಹುಸಂಖ್ಯೆಯಲ್ಲಿ ವಾಸಿಸುತ್ತಾರೆ) ಇದ್ದು, ಘೋರ ತಪಸ್ಸನ್ನಾಚರಿಸಿದರು. ನಂತರ ಅನೇಕ ಜನೋಪಯೋಗಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಂದಿನಿಂದ ಆರಂಭವಾದ ಅವರ 'ಸೇವಾಯಜ್ಞ' ಅವಿರತವಾಗಿ ಅವರ ಜೀವನದುದ್ದಕ್ಕೂ, ಸುಮಾರು ಒಂದು ಶತಮಾನದ ಕಾಲ ನಡೆದುಕೊಂಡು ಬಂದಿತು.

ಸ್ವಾಮಿ ವಿವೇಕಾನಂದರ ಮೇರು ವ್ಯಕ್ತಿತ್ವ ಹಾಗೂ ಅವರು ನೀಡಿದ ಸಲಹೆಗಳು ಕಲ್ಯಾಣದೇವರ ಮೇಲೆ ಅಳಿಸಲಾಗದ ಪ್ರಭಾವವನ್ನು ಉಂಟುಮಾಡಿದ್ದವು. ನಾವಾಗಲೇ ನೋಡಿರುವಂತೆ, ಈ ಭೇಟಿಯ ನಂತರವೆ ಅವರಿಗೆ ಗುರುಲಾಭವಾದದ್ದು ಹಾಗೂ ಸಂನ್ಯಾಸ ದೀಕ್ಷೆಯಾದದ್ದು. ನಂತರ, ಅವರು ತಮ್ಮ ಉಳಿದ ಜೀವಮಾನದಲ್ಲಿ ಹಳ್ಳಿಯಿಂದ ಹಳ್ಳಿಗೆ ಕಾಲ್ನಡಿಗೆಯಲ್ಲೆ ಸಂಚರಿಸುತ್ತ, ರೈತರ, ಕಾರ್ಮಿಕರ, ದರಿದ್ರರ ಹಾಗೂ ದಲಿತರ ಸೇವೆ ಮಾಡಿದರು. ಒಂದು ಶತಮಾನಕ್ಕೂ ಮೀರಿದ ತಮ್ಮ ಅವಿರತ ಪರಿಶ್ರಮದ ಫಲವಾಗಿ ಸ್ವಾಮಿ ಕಲ್ಯಾಣ್ ದೇವರು ಶಿಕ್ಷಣದ ಪ್ರಚಾರಕ್ಕಾಗಿಯೂ, ವಿಶೇಷವಾಗಿ ಕೆಳ ವರ್ಗದ ಜನಗಳಿಗೆ ಪ್ರಯೋಜನವಾಗುವಂತಹ ಸೇವಾಸೌಲಭ್ಯಗಳನ್ನು ಹಳ್ಳಿ–ಹಳ್ಳಿಗಳಿಗೂ ಒದಗಿಸುವ ಸಲುವಾಗಿ ೩೦೦ ಕ್ಕೂ ಅಧಿಕ ಸಂಸ್ಥೆಗಳನ್ನು ಸ್ಥಾಪಿಸಿದರು. ಅವರ ಕಾರ್ಯವ್ಯಾಪ್ತಿಯು ಉತ್ತರಪ್ರದೇಶದ ಪಶ್ಚಿಮ ಭಾಗ, ಹರ್ಯಾಣ, ಪಂಜಾಬ್, ರಾಜಸ್ಥಾನ, ದೆಹಲಿ ಹಾಗೂ ಇತರ ರಾಜ್ಯಗಳನ್ನು ಒಳಗೊಂಡಿತ್ತು. ಅವರು ಸ್ಥಾಪಿಸಿರುವ ಸಂಸ್ಥೆಗಳಲ್ಲಿ ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣ ನೀಡುವ ಸಂಸ್ಥೆಗಳು, ಆಯುರ್ವೇದ ವೈದ್ಯಕೀಯ ಕಾಲೇಜು, ಪ್ರಾಥಮಿಕ ಶಾಲೆಗಳು, ಮಾಧ್ಯಮಿಕ ಶಾಲೆಗಳು, ಪ್ರೌಢ ಶಾಲೆಗಳು, ಬಾಲಕಿಯರ ಶಾಲೆಗಳು, ಔಷಧಾಲಯಗಳು, ಕಣ್ಣಿನ ಚಿಕಿತ್ಸಾಲಯಗಳು, ಸಂಸ್ಕೃತ ಶಾಲೆಗಳು, ತರಬೇತಿ ಶಿಬಿರಗಳು, ವಿದ್ಯಾರ್ಥಿನಿಲಯಗಳು, ಧರ್ಮಶಾಲೆಗಳು, ಕಿವುಡರ ಹಾಗೂ ಮೂಗರ ಶಾಲೆಗಳು, ಕುರುಡರ ಶಾಲೆಗಳು, ಯೋಗ ತರಬೇತಿ ಕೇಂದ್ರಗಳು, ವೃದ್ಧಾಶ್ರಮಗಳು, ಮುದಿ ಪಸುಗಳಿಗಾಗಿ ಆಶ್ರಯ ಸ್ಥಾನಗಳು, ಅನಾಥಾಲಯಗಳು, ಹುತಾತ್ಮರಿಗಾಗಿ ಸ್ಮಾರಕಗಳು ಹಾಗೂ ಇತರೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕೇಂದ್ರಗಳು ಇದವು. ಈ ಎಲ್ಲ ಸಂಸ್ಥೆಗಳಲ್ಲಿ ಯಾವುದೇ ರೀತಿಯ ಜಾತಿ–ಲಿಂಗಗಳ ಭೇದವಿಲ್ಲ. ಧನಿಕರಾಗಲಿ, ದರಿದ್ರರಾಗಲಿ ಎಲ್ಲರಿಗೂ ಅಲ್ಲಿ ಸಮಾನವಾಗಿ ಚಿಕಿತ್ಸೆ ನೀಡಲಾಗುತ್ತದೆ.

ಸ್ವಾಮಿ ಕಲ್ಯಾಣದೇವರ ಪರಿಶ್ರಮಗಳೆಲ್ಲ ಆಧುನಿಕ ವಿಚಾರಗಳಿಂದ ಸಾಮಾಜಿಕ ಚೈತನ್ಯವನ್ನು ಮೇಲೆತ್ತುವ ಪ್ರಯತ್ನವಾಗಿತ್ತು

ಎಂಬುದನ್ನು ತೋರಿಸುತ್ತವೆ. ಅವರು ಅಸ್ಪೃಶ್ಯತೆ, ಮದ್ಯಪಾನ, ಬಾಲ್ಯವಿವಾಹ ಹಾಗೂ ಇತರ ಸಾಮಾಜಿಕ ಕೆಡುಕುಗಳ ವಿರುದ್ಧ ಹೋರಾಡಿದರು. ಇಷ್ಟೊಂದು ಸಂಸ್ಥೆಗಳನ್ನು ಸ್ಥಾಪಿಸಿಯೂ ಕೂಡ, ಅವರು ಆ ಸಂಸ್ಥೆಗಳಲ್ಲಿ ಯಾವ ಉನ್ನತ ಹುದ್ದೆಯನ್ನೂ ಅಲಂಕರಿಸಲಿಲ್ಲ.

ಇಷ್ಟೆ ಅಲ್ಲದೆ ಸ್ವಾಮಿಗಳು ಪಾಳುಬಿದ್ದ ಹಾಗೂ ಅಲಕ್ಷ್ಯಕ್ಕೆ ತುತ್ತಾದ ಐತಿಹಾಸಿಕ ಹಾಗೂ ಧಾರ್ಮಿಕ ಸ್ಥಳಗಳನ್ನು ಪುನರುಜ್ಜೀವನಗೊಳಿಸಲು ಕೂಡ ನೆರವು ನೀಡಿದರು. ಉದಾಹರಣೆಗೆ, ಮೀರತ್‌ನಿಂದ ಉತ್ತರಕ್ಕೆ ೬೦ ಕಿ.ಮೀ. ದೂರದಲ್ಲಿರುವ, ವ್ಯಾಸ ಮುನಿಯ ಮಗನಾದ ಶುಕದೇವನಿಗೆ ಸಂಬಂಧಿಸಿದ 'ಶುಕತಾಲ' ದಲ್ಲಿನ ಸ್ಮಾರಕವನ್ನು ನವೀಕರಣಗೊಳಿಸಿದರು. ಅಲ್ಲಿ ಸ್ವಾಮಿಗಳು, ಶುಕದೇವ ಆಶ್ರಮ ಮತ್ತು ಸೇವಾಸಮಿತಿಯೊಂದನ್ನು ಸ್ಥಾಪಿಸಿದರು. ಪಾಂಡವರ ಹಾಗೂ ಕೌರವರ ಹಳೆಯ ರಾಜಧಾನಿಯಾಗಿದ್ದ ಹಸ್ತಿನಾಪುರದ ಭಾಗಗಳನ್ನು ಪುನರುಜ್ಜೀವನಗೊಳಿಸಿದರು. ಹರ್ಯಾಣದ ಹಲವು ತೀರ್ಥಕ್ಷೇತ್ರಗಳೂ ಅವರ ದೃಷ್ಟಿಗೆ ಬಿದ್ದು ಅನುಕೂಲವನ್ನು ಪಡೆದವು. ಈ ರೀತಿಯ ಕಾರ್ಯಗಳಲ್ಲಿ, ಸ್ವಾಮಿಗಳು ಯಾತ್ರಾರ್ಥಿಗಳ ಸುರಕ್ಷತೆಗೆ ಅಸಾಮಾನ್ಯ ಕಾಳಜಿ ವಹಿಸುತ್ತಿದ್ದರು.

೧೨೮ ನೆಯ ವಯಸ್ಸಿನಲ್ಲೂ ಸ್ವಾಮಿ ಕಲ್ಯಾಣದೇವರು ಬಡವರನ್ನು ಸ್ವಯಂ ನಾರಾಯಣರೆಂದು ಭಾವಿಸಿ ಅವರ ಸೇವೆ ಮಾಡುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರು ನಿರ್ಭಯರಾಗಿದ್ದರು: ರೋಗ–ದುಃಖಗಳು ಎಂದಿಗೂ ಅವರನ್ನು ವಿಚಲಿತಗೊಳಿಸಲಿಲ್ಲ. ಸ್ವಭಾವದಿಂದ ಅವರು ಸರಳರೂ, ಮುಗ್ಧರೂ ಆಗಿದ್ದರು. ನಸುಕಿನಿಂದ ಮುಸ್ಸಂಜೆಯವರೆಗೂ ಎಲ್ಲ ಬಗೆಯ ಜನಗಳು ಅವರನ್ನು ಮುತ್ತಿಕೊಳ್ಳುತ್ತಿದ್ದರು. ಸ್ವಾಮಿಗಳು ಅವರ ಮಾತುಗಳನ್ನು ತಾಳ್ಮೆಯಿಂದ ಆಲಿಸಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು. ಹೀಗೆ ಜನರ ಬೇಡಿಕೆಗಳನ್ನು ಪೂರೈಸಿ ಅವರ ಕಷ್ಟಗಳನ್ನು ಪರಿಹರಿಸಲು ಸಹಾಯ ನೀಡಿದರು.

೧೯೧೫ ರಲ್ಲಿ ಸ್ವಾಮಿ ಕಲ್ಯಾಣದೇವರು ಮಹಾತ್ಮ ಗಾಂಧಿಯವರನ್ನು ಭೇಟಿಯಾದರು. ಅವರಿಗೆ ಪಂಡಿತ್ ಮದನಮೋಹನ ಮಾಲವೀಯ, ಪಂಡಿತ್ ಜವಹರ್‌ಲಾಲ್ ನೆಹರು ಹಾಗೂ ಡಾ. ಸಂಪೂರ್ಣಾನಂದರ ಪರಿಚಯವಾಯಿತು. ೧೯೮೨ ರಲ್ಲಿ ಅವರಿಗೆ ಪದ್ಮಶ್ರೀ ಹಾಗೂ ೨೦೦೦ ರಲ್ಲಿ ಪದ್ಮಭೂಷಣ ಪ್ರಶಸ್ತಿಗಳು ಲಭಿಸಿದವು. ಮೀರತ್ ವಿಶ್ವವಿದ್ಯಾಲಯವು ಅವರಿಗೆ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು. ೨೦೦೨ ರಲ್ಲಿ ಭಾರತದ ಆಗಿನ ಪ್ರಧಾನಮಂತ್ರಿಗಳಾದ ಶ್ರೀ ಅಟಲ್‌ಬಿಹಾರಿ ವಾಜಪೇಯಿಯವರು ಅವರ ಗೌರವಾರ್ಥವಾಗಿ ಸ್ವಾಮಿಗಳ ಸಮಕ್ಷಮದಲ್ಲಿ **'ಮೂರು ಶತಮಾನಗಳ ದ್ರಷ್ಟಾರ: ಸ್ವಾಮಿ ಕಲ್ಯಾಣ್‌ದೇವ್'** ಎಂಬ ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಿದರು.

ಸ್ವಾಮಿ ವಿವೇಕಾನಂದರು ಹೇಳಿದ್ದರು: **"ಕ್ರಿಸ್ತ ಹೇಳಿದ್ದನ್ನು ನೀವು ಕೇಳಿರಬಹುದು, 'ನನ್ನ ಮಾತುಗಳು ಚೈತನ್ಯಮಯ ಮತ್ತು ಅವು ಜೀವಂತವಾದವು.' ಹಾಗೇ ನನ್ನ ಮಾತುಗಳೂ ಚೈತನ್ಯಮಯ ಮತ್ತು ಜೀವಂತವಾದವು; ಅವು ನಿಮ್ಮ ಮಸ್ತಿಷ್ಕವನ್ನು ಸುಡುತ್ತ ದಾರಿ ಮಾಡಿಕೊಳ್ಳುತ್ತದೆ ಮತ್ತು ನೀವು ಅದರಿಂದ ತಪ್ಪಿಸಿಕೊಳ್ಳಲಾರಿರಿ!" ಸ್ವಾಮಿ ಕಲ್ಯಾಣದೇವರ ಜೀವನದಲ್ಲಿ ಈ ಮಾತಿನ ಸತ್ಯವು ಗೋಚರಿಸುತ್ತದೆ. ಅವರದು ತ್ಯಾಗ–ಸೇವೆಗಳ ಮಹಾನ್ ಜೀವನ; ಹಾಗೆಂದೇ ಅದು ಎಲ್ಲರಿಗೂ ಅನುಕರಣೀಯವಾದ ಜೀವನವಾಗಿದೆ.**

## ಮನುಷ್ಯನ ತಲೆಯ ಬೆಲೆ

**ಸಾಮ್ರಾಟ್ ಅಶೋಕನು ಬೌದ್ಧ ಧರ್ಮವನ್ನು ಸ್ವೀಕರಿಸಿದ ನಂತರ, ಯಾವಾಗಲೂ ಬೌದ್ಧಭಿಕ್ಷುಗಳನ್ನು ಕಂಡರೆ, ತಲೆಬಾಗಿಸಿ ಕಾಲುಮುಟ್ಟಿ ನಮಸ್ಕಾರ ಮಾಡುತ್ತಿದ್ದನು. ಆತನ ಮಂತ್ರಿ ಯಶ ಎನ್ನುವವನಿಗೆ ಇದನ್ನು ಕಂಡು ದುಃಖವಾಗುತ್ತಿತ್ತು. ಒಂದು ಸಲ ಅವನು ಅಶೋಕನಿಗೆ ಹೇಳಿಯೂ ಬಿಟ್ಟ: "ಮಹಾರಾಜ, ನನ್ನ ಅಹಂಕಾರವನ್ನು ದಯವಿಟ್ಟು ಕ್ಷಮಿಸಿ. ನೀವು ಮಹಾರಾಜರಾದ ಮೇಲೆ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದೀರಿ. ಅದು ನಿಮ್ಮ ವೈಯಕ್ತಿಕ ವಿಷಯ. ಆದರೆ ಯಾವ ಭಿಕ್ಷುವನ್ನು ನೋಡಿದರೂ, ತಲೆಬಾಗಿ ನಮಸ್ಕಾರ ಮಾಡುವುದು ರಾಜನಿಗೆ ಶೋಭಿಸುವುದಿಲ್ಲ. ರಾಜ ತನ್ನ ಪದವಿಯ ಗೌರವವನ್ನು ಕಾಪಾಡಿಕೊಳ್ಳಬೇಕು."**

**ಅಶೋಕ ಆಗ ಏನೂ ಹೇಳಲಿಲ್ಲ. ಆದರೆ ಸ್ವಲ್ಪ ಸಮಯದ ನಂತರ ಸಿಪಾಯಿಗಳಿಗೆ, ಕಟುಕನ ಅಂಗಡಿಯಿಂದ ಆಡು ಮತ್ತು ಕುರಿಯ ಎರಡೆರಡು ತಲೆಗಳನ್ನು ತರಲು ಹೇಳಿದ. ನಂತರ "ಈಗ ಪೇಟೆಯಿಂದ ಮನುಷ್ಯರ ತಲೆಗಳನ್ನೂ ಕೊಂಡು ತನ್ನಿ" ಎಂದ. ಆಗ ಸಿಪಾಯಿಗಳು ಹೇಳಿದರು: "ಮಹಾರಾಜ, ಪೇಟೆಯಲ್ಲಿ ಮನುಷ್ಯರ ತಲೆಗಳನ್ನು ಮಾರುವುದಿಲ್ಲ." ಅಶೋಕ ಯಶನನ್ನು ಕೇಳಿದ: "ಮಂತ್ರಿಗಳೇ, ಸಿಪಾಯಿಗಳು ಸತ್ಯವನ್ನೇ ಹೇಳುತ್ತಿದ್ದಾರಷ್ಟೆ!"**

**ಯಶ ಹೇಳಿದ, "ಹೌದು, ಮಹಾರಾಜ. ಸಿಪಾಯಿ ಸರಿಯಾಗಿಯೇ ಹೇಳುತ್ತಿದ್ದಾನೆ. ಮನುಷ್ಯನ ತಲೆಗೆ ಯಾವ ಬೆಲೆಯೂ ಸಿಕ್ಕುವುದಿಲ್ಲ. ಆದ್ದರಿಂದ ಅದನ್ನು ಯಾರೂ ಮಾರುವುದಿಲ್ಲ." ರಾಜ ಮತ್ತೆ ಹೇಳಿದ, " ಇದರ ಅರ್ಥ, ಮನುಷ್ಯನ ತಲೆಗೆ ಬೆಲೆ ಇಲ್ಲ ಎಂದು, ಅಲ್ಲವೇ? ಏಕೆ ಹೀಗೆ?" ಯಶ ಹೇಳಿದ, " ಮಹಾರಾಜ, ಜನರು ಅದನ್ನು ಅಸಹ್ಯವಾಗಿ ನೋಡುತ್ತಾರೆ. ಆದ್ದರಿಂದಲೇ ಅದಕ್ಕೆ ಏನೂ ಬೆಲೆ ಇಲ್ಲ." ರಾಜ ಹೇಳಿದ: "ಹಾಗಾದರೆ, ನನ್ನ ತಲೆಯನ್ನು ಕೂಡಾ ಜನರು ಅಸಹ್ಯವಾಗಿ ನೋಡುತ್ತಾರೆ, ಅಲ್ಲವೇ?" ಯಶ ಹಿಂದೆ ಮುಂದೆ ನೋಡುತ್ತಾ, ಹೆದರುತ್ತ ಉತ್ತರಿಸಿದ: "ಹೌದು, ಮಹಾರಾಜ, ತಮ್ಮ ತಲೆಯನ್ನೂ ಕೂಡ ಜನರು ಅಸಹ್ಯವಾಗಿ ನೋಡುತ್ತಾರೆ." ಆಗ ಅಶೋಕನು ಗಂಭೀರವಾಗಿ ಹೇಳಿದನು, "ಜನರು ನನ್ನ ತಲೆಯನ್ನು ಅಸಹ್ಯವಾಗಿ ಕಾಣುತ್ತಾರೆ ಎಂದು, ನಾನೂ ಕೂಡ ಅದನ್ನು ಹಾಗೆಯೇ ಕಾಣಬೇಕೇನು? ನಾನು ಭಿಕ್ಷುಗಳ ಬಳಿ ತಲೆ ಬಾಗಿಸಿದಲ್ಲಿ ತಪ್ಪೇನು? ಭಿಕ್ಷುಗಳು ಸಾಮಾನ್ಯರಲ್ಲ. ಅವರ ಸಮ್ಮುಖದಲ್ಲಿ, ಯಾವ ವ್ಯಕ್ತಿಯಾದಾರೂ ಕೂಡ, ರಾಜನಾದರೂ ಸರಿಯೇ, ತಲೆಬಾಗಲೇಬೇಕು. ಇದರಲ್ಲಿ ದುಃಖಪಡುವುದಾಗಲೀ, ಅಗೌರವವಾದದ್ದಾಗಲಿ ಏನಿದೆ?"**

**ರಾಜನ ಮಾತು ಕೇಳಿ, ಯಶನಿಗೆ ನಾಚಿಕೆಯಾಯಿತು. ರಾಜನು ಮಾತು ಮುಂದುವರಿಸಿದನು: " ನಮ್ಮನ್ನು ನಾವು ಗೌರವಿಸಿಕೊಳ್ಳುವುದನ್ನು ಬಿಟ್ಟು, ಬೇರೆಯವರಿಗೆ ಸನ್ಮಾನ ನೀಡಬೇಕು. ಮನುಷ್ಯನ ದೊಡ್ಡತನ ಇರುವುದು, ಬೇರೆಯವರನ್ನು ಕೀಳಾಗಿ ಕಾಣುವುದರಲ್ಲಿ ಅಲ್ಲ. ನಮ್ಮನ್ನು ಕಿರಿಯರೆಂದು ಭಾವಿಸುವುದರಲ್ಲಿಯೇ ನಮ್ಮ ಹಿರಿಯತನವಿದೆ. ಈ ಮನೋಭಾವನೆಯೇ ಮನುಷ್ಯನನ್ನು ಮೇಲಕ್ಕೆ ಎತ್ತುವುದು." (ಸಂಗ್ರಹ: ಸ್ವಾಮಿ ಶಾಂತಿನಾಥಾನಂದ)**